# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 735 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 12-12-2025 |
| ಉತ್ತರಿಸುವವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿಂದುಳಿದ ಅಲೆಮಾರಿ ಅರೆ-ಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ವಿದ್ಯಾರ್ಥಿ ನಿಲಯಗಳು, ವಸತಿ ಶಾಲೆಗಳು ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಹಿಂದುಳಿದ ಅಲೆಮಾರಿ / ಅರೆ-ಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ವಿದ್ಯಾರ್ಥಿ ನಿಲಯಗಳು, ವಸತಿ ಶಾಲೆಗಳು ಹಾಗೂ ಸದರಿ ವಿದ್ಯಾರ್ಥಿ ನಿಲಯ / ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| ಆ) | ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ಅಲೆಮಾರಿ / ಅರೆ-ಅಲೆಮಾರಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಬಾಲಕ / ಬಾಲಕಿ ಪ್ರತ್ಯೇಕವಾಗಿ ವಿವರ ನೀಡುವುದು; | |
| ಇ) | ವಿದ್ಯಾಭ್ಯಾಸ ವಂಚಿತರಾಗದಂತೆ ಎಲ್ಲಾ ಹಿಂದುಳಿದ ಅಲೆಮಾರಿ / ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಪ್ರವೇಶ ನೀಡಲಾಗಿದೆಯೇ: | ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಪ್ರವೇಶ ಕೋರಿ ಅರ್ಜಿ ಸಲ್ಲಿಸಿರುವ ಹಿಂದುಳಿದ ಅಲೆಮಾರಿ / ಅರೆ-ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲಾಗುತ್ತಿದೆ. |
| ಈ) | ನೀಡದೇ ಇದ್ದಲ್ಲಿ, ಎಷ್ಟು ವಿದ್ಯಾರ್ಥಿಗಳಿಗೆ ನೀಡಿರುವುದಿಲ್ಲ; (ಜಿಲ್ಲಾವಾರು ಮಾಹಿತಿ ನೀಡುವುದು) | |
| ಉ) | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಲೆಮಾರಿ ಜನಾಂಗಕ್ಕೆ ನೀಡಿದಂತೆ ಹಿಂದುಳಿದ ಅಲೆಮಾರಿ ಜನಾಂಗದವರಿಗೂ ಶಿಕ್ಷಣ ಸೌಲಭ್ಯ ನೀಡುವಲ್ಲಿ ಸರ್ಕಾರದ ನೀತಿ ನಿರೂಪಣೆಗಳೇನು: ವಿವರದೊಂದಿಗೆ ಸಲ್ಲಿಸುವುದು? | ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗಾಗಿ ಅಧಿಸೂಚಿಸಲಾಗಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ-I ರಡಿ ಬರುವ ಅಲೆಮಾರಿ / ಅರೆ-ಅಲೆಮಾರಿ ವಿದ್ಯಾರ್ಥಿಗಳಿಗೆ / ಅಭ್ಯರ್ಥಿಗಳಿಗೆ ಕೆನೆಪದರ ನೀತಿಗೆ ವಿನಾಯಿತಿ ನೀಡಲಾಗಿದೆ.<br><br>ಈ ಅಲೆಮಾರಿ / ಅರೆ-ಅಲೆಮಾರಿ ಸಮುದಾಯದ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ಪ್ರತ್ಯೇಕವಾಗಿ ಅಲೆಮಾರಿ ವಸತಿ ಶಾಲೆಗಳು, ಅಲೆಮಾರಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲಾಗಿದೆ.<br><br>ಈ ಸಮುದಾಯದ ವಿದ್ಯಾರ್ಥಿಗಳಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿನ 6ನೇ ತರಗತಿಯ ಪ್ರವೇಶಕ್ಕೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗೆ ವಿನಾಯಿತಿ ನೀಡಿ, ವಿಶೇಷ ವರ್ಗದಡಿ ಶೇಕಡ 10% ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. |

...2..

| | | |
|---|---|---|
| | | ಮುಂದುವರೆದು, ವಿದ್ಯಾರ್ಥಿ ವೇತನ ಹಾಗೂ ಶುಲ್ಕ ವಿನಾಯಿತಿ ಕಾರ್ಯಕ್ರಮ ಯೋಜನೆಯಡಿ ಈ ಸಮುದಾಯದ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯ ಮಿತಿಯನ್ನು ರೂ.2.50 ಲಕ್ಷಗಳಿಗೆ ನಿಗದಿಪಡಿಸಿದ್ದು, ಬೇರೆ ಪ್ರವರ್ಗದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯದ ಮಿತಿಯನ್ನು ರೂ.1.00 ಲಕ್ಷಗಳಿಗೆ ನಿಗಧಿಗೊಳಿಸಲಾಗಿದೆ.<br><br>ಶುಲ್ಕ ವಿನಾಯಿತಿ ಯೋಜನೆಯಡಿ ಮಂಜೂರು ಮಾಡುವಾಗ ಆಧ್ಯತೆಯ ಮೇಲೆ ಅರ್ಹತೆ ಹೊಂದಿರುವ ಪ್ರವರ್ಗ-Iರ ಎಲ್ಲಾ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುತ್ತಿದೆ. |

ಸಂಖ್ಯೆ: ಹಿಂವಕ 1206 ಬಿಎಂಎಸ್ 2025

(ಶಿವರಾಜ.ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

## ಅನುಬಂಧ

**ರಾಜ್ಯದಲ್ಲಿ ಹಿಂದುಳಿದ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ವಿವರ**

| ಕ್ರ ಸಂ. | ಜಿಲ್ಲೆ | ವಿದ್ಯಾರ್ಥಿನಿಲಯ/ ವಸತಿಶಾಲೆ ವಿವರ | ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | | ಒಟ್ಟು |
|---|---|---|---|---|---|
| | | | ಬಾಲಕ | ಬಾಲಕಿ | |
| 1 | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕಿಯರ ಅಲೆಮಾರಿ/ ಅರೆಅಲೆಮಾರಿ ವಿದ್ಯಾರ್ಥಿನಿಲಯ (HIC1830) | - | 125 | **125** |
| 2 | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕಿಯರ ಅಲೆಮಾರಿ/ ಅರೆಅಲೆಮಾರಿ ವಿದ್ಯಾರ್ಥಿನಿಲಯ (HIC2195) | - | 125 | **125** |
| 3 | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕರ ಅಲೆಮಾರಿ/ ಅರೆಅಲೆಮಾರಿ ವಿದ್ಯಾರ್ಥಿನಿಲಯ (HIC2315) | 125 | - | **125** |
| 4 | ಬೆಳಗಾವಿ | ಡಿ.ದೇವರಾಜ ಅರಸು ವಸತಿಶಾಲೆ (ಅಲೆಮಾರಿ/ ಅರೆಅಲೆಮಾರಿ), ಗೋಕಾಕ್, ಬೆಳಗಾವಿ ಜಿಲ್ಲೆ | 83 | 42 | **125** |
| 5 | ಚಿಕ್ಕಮಗಳೂರು | ಡಿ.ದೇವರಾಜ ಅರಸು ವಸತಿಶಾಲೆ (ಅಲೆಮಾರಿ/ ಅರೆಅಲೆಮಾರಿ), ಬೀರೂರು, ಚಿಕ್ಕಮಗಳೂರು ಜಿಲ್ಲೆ. | 79 | 46 | **125** |
| 6 | ಕೊಪ್ಪಳ | ಡಿ.ದೇವರಾಜ ಅರಸು ವಸತಿಶಾಲೆ (ಅಲೆಮಾರಿ/ಅರೆಅಲೆಮಾರಿ), ತಾವರಗೇರಾ, ಕೊಪ್ಪಳ ಜಿಲ್ಲೆ. | 69 | 56 | **125** |
| 7 | ಕಲಬುರಗಿ | ಡಿ.ದೇವರಾಜ ಅರಸು ವಸತಿಶಾಲೆ (ಅಲೆಮಾರಿ/ ಅರೆಅಲೆಮಾರಿ), ಆಳಂದ ಚೆಕ್‌ಪೋಸ್ಟ್, ಕಲಬುರಗಿ ಜಿಲ್ಲೆ. | 66 | 59 | **125** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.